**FEBRUARY 01, 2025**

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- **ರಾಜ್ಯ ಸರ್ಕಾರದಿಂದ, ಕಾಡಂಚಿನ ವನ್ಯಜೀವಿಗಳ ಸಂರಕ್ಷಣೆಗೆ, ವಿಶೇಷ ಕಾರಿಡಾರ್ ನಿರ್ಮಾಣ.**

- **ಉತ್ತರಕನ್ನಡದ, ಸಮುದ್ರ ತೀರ ಮತ್ತು ನದಿಗಳಲ್ಲಿ, ಪ್ಲಾಸ್ಟಿಕ್ ನಿಯಂತ್ರಿಸಲು, 'ಕೋಸ್ಟಲ್ ಮೆರೈನ್ ಇಕೋ ಸಿಸ್ಟಂ' ಜಾರಿಗೆ.**

- **ವರಕವಿ ಬೇಂದ್ರೆಯವರ, ಶ್ರೀ ವಿಠ್ಠಲ ಚಿಂತನೆಯ, 'ಅವಿಭಕ್ತ' ಕೃತಿ ಇಂದು ಬೆಂಗಳೂರಿನಲ್ಲಿ, ಬಿಡುಗಡೆ.**
- **ಧಾರವಾಡದ ಅಮರಗೋಳ ಎ.ಪಿ.ಎಂ.ಸಿ.ಯಲ್ಲಿ, ಮೂರು ದಿನಗಳ ಒಣ ಮೆಣಸಿನಕಾಯಿ ಮೇಳ, ಆರಂಭ.**
- **ಇಂದು, ಶ್ರೀ ಮಡಿವಾಳ ಮಾಚಿದೇವರ ಜಯಂತ್ಯುತ್ಸವ.**

<><><>

**ಈಗ ವಾರ್ತೆಗಳ ವಿವರ**

<><><>

**ರಾಜ್ಯದ ಕಾಡಂಚಿನ ಜನ ವಸತಿಗಳಲ್ಲಿ, ಮಾನವ ಮತ್ತು ವನ್ಯಜೀವಿ ಸಂಘ ´೯ ತಡೆಯುವ ನಿಟ್ಟಿನಲ್ಲಿ, ಅರಣ್ಯ ಇಲಾಖೆ ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಳ್ಳಲಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಮಡಿಕೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ವನ್ಯಜೀವಿ ಸಂರಕ್ಷಣೆಗೆ, ವಿಶೇಷ ಕಾರಿಡಾರ್ ರೂಪಿಸಲಾಗುವುದು. ಆನೆ, ಚಿರತೆ, ಹುಲಿಗಳು, ಆಹಾರ, ನೀರು ಅರಸಿ ನಾಡಿಗೆ ಬರದಂತೆ, ಕಾಡಿನಲ್ಲೇ ವ್ಯವಸ್ಥೆ ಮಾಡಲಾಗುವುದು ಎಂದರು.**

<><><>

**ಭಾಗಮಂಡಲದ ಬಳಿ, ಮಡಿಕೇರಿ, ತಲಕಾವೇರಿ ಮತ್ತು ನಾಪೋಕ್ಲುವಿನಲ್ಲಿ, ಕಾವೇರಿ ನದಿಗೆ ನಿರ್ಮಿಸಲಾದ, ನೂತನ ಮೇಲ್ಸೇತುವೆಯನ್ನು ಮುಖ್ಯಮಂತ್ರಿ ಉದ್ಘಾಟಿಸಿದರು.**

<><><>

**ಇಂದು ಮಂಡನೆಯಾಗಲಿರುವ ಕೇಂದ್ರ ಮುಂಗಡಪತ್ರದಲ್ಲಿ, ರಾಜ್ಯಕ್ಕೆ ಹಲವು ಯೋಜನೆಗಳನ್ನು ಮಂಡಿಸುವಂತೆ ಕೋರಲಾಗಿದೆ ಎಂದು ತಿಳಿಸಿದರು.**

<><><>

ಕೊಡಗು ಜಿಲ್ಲೆ, ಪ್ರವಾಸಿಗರಿಗಾಗಿ ಜಾಲತಾಣ explore kodagu.comನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಡುಗಡೆ ಮಾಡಿದರು.

<><><>

ಉತ್ತರಕನ್ನಡ ಜಿಲ್ಲೆಯಲ್ಲಿ, ಸಮುದ್ರ ತೀರ ಮತ್ತು ನದಿಗಳಲ್ಲಿ, ಪ್ಲಾಸ್ಟಿಕ್ ಹಾವಳಿ ತಡೆಯಲು, ಅರಣ್ಯ ಇಲಾಖೆ, ಕೋಸ್ಟಲ್ ಮೆರೈನ್ ಇಕೋ ಸಿಸ್ಟಂ ಜಾರಿಗೆ ತಂದಿದೆ; ಕೆ–ಶೋರ್ ಯೋಜನೆಯಡಿ, ಮಹತ್ವದ ಕಾರ್ಯ ನಡೆದಿದೆ ಎಂದು, ಅರಣ್ಯ ಸಂರಕ್ಷಣಾಧಿಕಾರಿ ಮಂಜುನಾಥ ನಾವಿ ತಿಳಿಸಿದ್ದಾರೆ. ಕಾರವಾರದ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ, ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ ವತಿಯಿಂದ, ರಾಜ್ಯ ಕ್ರಿಯಾ ಯೋಜನೆ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು. ಸಂಪನ್ಮೂಲ ವ್ಯಕ್ತಿ ಪ್ರಕಾಶ್ ಮೇಸ್ತಾ ಮಾತನಾಡಿ, ಹವಾಮಾನ ಬದಲಾವಣೆ ಅಧ್ಯಯನ ಕೈಗೊಳ್ಳಲು, ಉತ್ತರಕನ್ನಡ ಜಿಲ್ಲೆ ಮಹತ್ವದ ಸ್ಥಳ ಎಂದರು.

<><><>

ಬೆಂಗಳೂರು ಹೆಸರಘಟ್ಟ ಹುಲ್ಲುಗಾವಲು ಮತ್ತು ಕೆರೆಗಳನ್ನು 'ಗ್ರೇಟರ್ ಹೆಸರುಘಟ್ಟ ಹುಲ್ಲುಗಾವಲು ಸಂರಕ್ಷಣಾ ಮೀಸಲು' ಎಂದು, ರಾಜ್ಯ ಸರ್ಕಾರ ಘೋಷಿಸಿದ್ದಾಗಿ, ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ, ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಪ್ರಕಟಿಸಿದ್ದಾರೆ.

<><><>

ಈಶ್ವರ ಖಂಡ್ರೆ ಧ್ವನಿ 30 ಸೆಕೆಂದುಗಳು

<><><>

ಚೇತರಿಕೆಯ ಭರವಸೆಯಿಲ್ಲದ ರೋಗಿ, ಘನತೆಯಿಂದ ಮರಣ ಹೊಂದುವ ಹಕ್ಕಿನ ಕುರಿತು, ಸರ್ವೋಚ್ಚ ನ್ಯಾಯಾಲಯ ಹೊರಡಿಸಿರುವ ನಿರ್ದೇಶನವನ್ನು,  ರಾಜ್ಯ ಆರೋಗ್ಯ ಇಲಾಖೆ ಜಾರಿಗೊಳಿಸಿದೆ. ಅಡ್ವಾನ್ಸ್ ಮೆಡಿಕಲ್ ಡೈರೆಕ್ಟಿವ್ ಅಥವಾ ಲಿವಿಂಗ್ ವಿಲ್ ಯೋಜನೆ ಈ ಮೂಲಕ ರಾಜ್ಯದಲ್ಲಿ ಜಾರಿಗೊಂಡಿದೆ. ರೋಗಿಯು ಭವಿ ್ಯದಲ್ಲಿ ತಮ್ಮ ವೈದ್ಯಕೀಯ ಚಿಕಿತ್ಸೆ ಕುರಿತು, ತಮ್ಮ ಸ್ವ ಇಚ್ಛೆಗಳನ್ನು ದಾಖಲಿಸಬಹುದಾಗಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ. ಜೀವ ರಕ್ಷಕ ಚಿಕಿತ್ಸೆಗೆ ಯಾವುದೇ ಸ್ಪಂದನೆ ನೀಡದ ರೋಗಿಗಳು, ಈ ಆದೇಶದ ಪ್ರಯೋಜನ ಪಡೆಯಬಹುದು.

<><><>

ವರಕವಿ ಬೇಂದ್ರೆಯವರ, ಶ್ರೀ ವಿಠ್ಠಲ ಚಿಂತನೆಗಳ ಕುರಿತ, ಮರಾಠಿ ವ್ಯಾಖ್ಯಾನಗಳ ಸಂಗ್ರಹ, 'ಅವಿಭಕ್ತ' ಕೃತಿಯ ಬಿಡುಗಡೆ, ಇಂದು ಸಂಜೆ 4.30ಕ್ಕೆ, ಬೆಂಗಳೂರಿನ ಬನಶಂಕರಿಯ, ಸುಚಿತ್ರಾ ಫಿಲ್ಮ್ ಸೊಸೈಟಿಯ, ನಾಣಿ ನೆನಪಿನ ಅಂಗಳದಲ್ಲಿ ಜರುಗಲಿದೆ. ಕೃತಿಯ ಲೇಖಕ ಆನಂದ ಝುಂಜರವಾಡ, ಎಚ್.ಎಸ್.ರಾಘವೇಂದ್ರ ರಾವ್, ಲಕ್ಷ್ಮೀಶ ತೋಳ್ಪಾಡಿ ಹಾಗೂ ಒ.ಎಲ್. ನಾಗಭೂಷಣ ಸ್ವಾಮಿ ಅವರೊಂದಿಗೆ ಸಂವಾದ ಕಾರ್ಯಕ್ರಮ ಸಹ ಆಯೋಜಿತವಾಗಿದೆ. ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಧಾರವಾಡದ ಸಾಹಿತಿ ಆನಂದ ಝುಂಜರವಾಡ.

<><><>

ಸಾಹಿತಿ ಆನಂದ ಝುಂಜರವಾಡ ಧ್ವನಿ 45 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_dharwad ಹಾಗೂ
ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ನಾಕುತಂತಿಯ ವರಕವಿ ದ.ರಾ.ಬೇಂದ್ರೆ ಅವರ ಕವನಗಳನ್ನು, ಹಿಂದಿ ಸೇರಿದಂತೆ ದೇಶದ ಪ್ರಮುಖ ಭಾಷೆಗಳಿಗೆ ತರ್ಜುಮೆ ಮಾಡಬೇಕು; ಬೇಂದ್ರೆ ಅವರ ಸಾಹಿತ್ಯ ಎಲ್ಲರಿಗೂ ತಲುಪಬೇಕು ಎಂದು, ಧಾರವಾಡದ ಹಿರಿಯ ಸಾಹಿತಿ ಸಿದ್ಧಲಿಂಗ ಪಟ್ಟಣಶೆಟ್ಟಿ ಹೇಳಿದ್ದಾರೆ. ದ.ರಾ. ಬೇಂದ್ರೆ ಅವರ, 129ನೇ ಜನ್ಮ ದಿನದ ಹಿನ್ನೆಲೆ, ಧಾರವಾಡದ ಸಾಧನಕೇರಿಯ ಬೇಂದ್ರೆ ಭವನದಲ್ಲಿ, ಡಾಕ್ಟರ್ ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ವತಿಯಿಂದ, 'ಅಂಬಿಕಾತನಯದತ್ತ ರಾಷ್ಟ್ರೀಯ ಪ್ರಶಸ್ತಿ' ಪ್ರದಾನ ಮಾಡಿ ಅವರು ಮಾತನಾಡಿದರು.

<><><>

ಸಿದ್ಧಲಿಂಗ ಪಟ್ಟಣಶೆಟ್ಟಿ ಧ್ವನಿ 38 ಸೆಕೆಂದುಗಳು.

<><><>

ಧಾರವಾಡದ ಹಿರಿಯ ಸಾಹಿತಿ ಡಾಕ್ಟರ್ ವೀಣಾ ಶಾಂತೇಶ್ವರ ಹಾಗೂ ತುಮಕೂರಿನ ಹಿರಿಯ ವಿಮರ್ಶಕ, ಪ್ರೊಫೆಸರ್ ಎಸ್.ಜಿ.ಸಿದ್ಧರಾಮಯ್ಯ ಅವರಿಗೆ, 'ಅಂಬಿಕಾತನಯದತ್ತ ರಾಷ್ಟ್ರೀಯ ಪ್ರಶಸ್ತಿ'ಯನ್ನು ಪ್ರದಾನಿಸಿ, ಗೌರವಿಸಲಾಯಿತು.

<><><>

ಹಾವೇರಿ ಜಿಲ್ಲೆ, ಬ್ಯಾಡಗಿ ಒಣ ಮೆಣಸಿನಕಾಯಿಗೆ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೇಡಿಕೆ ಇದೆ. ಗದಗ ಹಾಗೂ ಹಾವೇರಿ ಜಿಲ್ಲೆಗಳಲ್ಲಿ, ಉತ್ತಮ ಗುಣಮಟ್ಟದ ಮೆಣಸಿನಕಾಯಿ ಬೆಳೆಯಲಾಗುತ್ತದೆ ಎಂದು, ಹುಬ್ಬಳ್ಳಿ ಪೂರ್ವ ವಿಧಾನಸಭಾ ಕ್ಷೇತ್ರದ ಶಾಸಕ ಪ್ರಸಾದ್ ಅಬ್ಬಯ್ಯ ಹೇಳಿದ್ದಾರೆ. ರಾಜ್ಯ ಸಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿ, ಕುಂದಗೋಳ ತಾಲೂಕು, ಸಂಶಿಯ ಅಮರಶಿವ ರೈತ ಉತ್ಪಾದಕರ ಸಂಸ್ಥೆ ಹಾಗೂ ಹುಬ್ಬಳ್ಳಿಯ, ಉಳುವಾಯೋಗಿ ರೈತ ಉತ್ಪಾದಕರ ಸಂಸ್ಥೆ ಸಹಯೋಗದಲ್ಲಿ, ಅಮರಗೋಳ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಆಯೋಜಿಸಿರುವ, ಮೂರು ದಿನಗಳ, 13ನೇ ಒಣ ಮೆಣಸಿನಕಾಯಿ ಮೇಳವನ್ನು ಉದ್ಘಾಟಿಸಿ ಅವರು, ಮಾತನಾಡಿದರು. ಕಳೆದ ಬಾರಿ ಮೇಳದಲ್ಲಿ, 447 ಕ್ವಿಂಟಾಲ್ ಮೆಣಸಿನಕಾಯಿ ಮಾರಾಟವಾಗಿ, 1 ಕೋಟಿ 37 ಲಕ್ಷ ರೂಪಾಯಿ ವಹಿವಾಟು ದಾಖಲಾಗಿತ್ತು. 1 ಲಕ್ಷ 50 ಸಾವಿರ ಎಕರೆ ಪ್ರದೇಶದಿಂದ, 1 ಲಕ್ಷದ 71 ಸಾವಿರ ಮೆಟ್ರಿಕ್ ಟನ್ ಮೆಣಸಿನಕಾಯಿ, ಮೇಳಕ್ಕೆ ಬಂದಿದೆ ಎಂದರು.

<><><>

2025–26ನೇ ಸಾಲಿನ, ಕೇಂದ್ರ ಬಜೆಟ್‌ನ್ನು ಹಣಕಾಸು ಖಾತೆ ಸಚಿವರಾದ ನಿರ್ಮಲಾ ಸೀತಾರಾಮನ್ ಇಂದು ಲೋಕಸಭೆಯಲ್ಲಿ ಮಂಡಿಸಲಿದ್ದಾರೆ. ಬಜೆಟ್ ಕಲಾಪವನ್ನು ಎಲ್ಲ ಆಕಾಶವಾಣಿ ಕೇಂದ್ರಗಳು ಇಂದು ನೇರ ಪ್ರಸಾರ ಮಾಡಲಿವೆ.

<><><>

ಇಂದು ಮಧ್ಯಾಹ್ನ 12 ಗಂಟೆಯ 5 ನಿಮಿಷಗಳ ಪ್ರದೇಶ ಸಮಾಚಾರ ಬಿತ್ತರವಾಗುವುದಿಲ್ಲ; 1.10ರ ರಾಷ್ಟ್ರೀಯ ವಾರ್ತೆ 1.50ಕ್ಕೆ ಪ್ರಸಾರವಾಗಲಿದೆ. ಮಧ್ಯಾಹ್ನ 2.30ರ ಪ್ರದೇಶ ಸಮಾಚಾರದ ಅವಧಿಯನ್ನು ಐದು ನಿಮಿ ’ ವಿಸ್ತರಿಸಲಾಗಿದ್ದು, 2.30 ರಿಂದ 2.45ರ ವರೆಗೆ ಪ್ರಸಾರವಾಗಲಿದೆ.

<><><>

ಆಕಾಶವಾಣಿ ಬೆಂಗಳೂರು ಪ್ರಾದೇಶಿಕ ಸುದ್ದಿ ವಿಭಾಗದಿಂದ, ಇಂದು ರಾತ್ರಿ 7.45 ರಿಂದ 8.45 ರ ವರೆಗೆ, ಕೇಂದ್ರ ಬಜೆಟ್ ಕುರಿತ ನೇರ ಚರ್ಚೆ ಮೂಡಿಬರಲಿದೆ.

<><><>

ವಿಜಯಪುರ ಜಿಲ್ಲೆ, ಸಿಂಧಗಿ ತಾಲೂಕು, ದೇವರ ಹಿಪ್ಪರಗಿಯಲ್ಲಿ ಪರುವತಯ್ಯ ಹಾಗೂ ಸುಜ್ಞಾನವ್ವ ದಂಪತಿಗಳ, ಸುಪುತ್ರನಾಗಿ ಜನಿಸಿದವರು, ಶ್ರೀ ಮಡಿವಾಳ ಮಾಚಿದೇವರು. ಅವರ ಕಾರ್ಯಕ್ಷೇತ್ರ ಕಲ್ಯಾಣ. ಆರಾಧ್ಯ ದೈವ ಕಲ್ಲಿನಾಥ. ಮಡಿವಾಳ ಮಾಚಿದೇವರ ಗದ್ದುಗೆ ಮುರಗೋಡದ ಹತ್ತಿರ ಕಾರಿಮನಿಯಲ್ಲಿದೆ.

<><><>

ಶ್ರೀ ಮಡಿವಾಳ ಮಾಚಿದೇವರ ಜಯಂತಿಯನ್ನು, ಇಂದು ನಾಡಿನಾದ್ಯಂತ ಶ್ರದ್ಧಾ-ಭಕ್ತಿಯಿಂದ ಆಚರಿಸಲಾಗುತ್ತಿದೆ.

<><><>

ಇಂದು ಮಧ್ಯಾಹ್ನ 12 ಗಂಟೆಗೆ, ಧಾರವಾಡದ ಆಲೂರು ವೆಂಕಟರಾವ ಸಾಂಸ್ಕೃತಿಕ ಭವನದಲ್ಲಿ ಜಯಂತ್ಯುತ್ಸವ ಆಯೋಜಿತವಾಗಿದೆ.

<><><>

ಶಿವಮೊಗ್ಗದ, ಐತಿಹಾಸಿಕ ಚಂದ್ರಗುತ್ತಿ ಕೋಟೆಯೊಳಗೆ, ವೀರ್ಗಲ್ಲು ಪತ್ತೆಯಾಗಿದೆ. ಪ್ರೌಢ ಶಾಲೆ ನಿವೃತ್ತ ಶಿಕ್ಷಕ ಯಶವಂತಪ್ಪ ಅವರು ಈ ವೀರ್ಗಲ್ಲು ಪತ್ತೆ ಹಚ್ಚಿದ್ದಾರೆ. ಇತಿಹಾಸ ಸಂಶೋಧಕ ಶ್ರೀಪಾದ ಬಿಚ್ಚುಗತ್ತಿ ಅವರ ಪ್ರಕಾರ, ಇದು ವಿಜಯನಗರ ಅರಸರ ಆಳ್ವಿಕೆ ಕಾಲದ ವೀರಗಲ್ಲು; ಆರಗದ ದೇವಪ್ಪ ಒಡೆಯರ ಉಲ್ಲೇಖವಿದೆ ಎಂದಿದ್ದಾರೆ.

<><><>

ಹೊಸ ದಿಲ್ಲಿಯ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕವಾಯತು ಮೈದಾನದಲ್ಲಿ ನಡೆದ, ರಾಷ್ಟ್ರೀಯ ಕೆಡೆಟ್ ಕಾರ್ಪ್ಸ್‌ನ, ಗಣರಾಜ್ಯೋತ್ಸವ ಶಿಬಿರದಲ್ಲಿ, ಕರ್ನಾಟಕ ಹಾಗೂ ಗೋವಾ ಎನ್.ಸಿ.ಸಿ. ನಿರ್ದೇಶನಾಲಯ, ಪ್ರಧಾನಮಂತ್ರಿಗಳ ಪದಕ ಗಳಿಸಿದೆ. ಕರ್ನಾಟಕ ಮತ್ತು ಗೋವಾ ಎನ್.ಸಿ.ಸಿ. ನಿರ್ದೇಶನಾಲಯದ, ಉಪ ಮಹಾನಿರ್ದೇಶಕ ಏರ್ ಕಮೋಡೋರ್ ಎಸ್.ಬಿ.ಅರುಣ್‌ಕುಮಾರ್ ಹಾಗೂ ಅವರ ತಂಡವನ್ನು, ಇಂದು ಮಧ್ಯಾಹ್ನ 12 ಗಂಟೆಗೆ ಬೆಂಗಳೂರಿನ ಜಾಲಹಳ್ಳಿ ಪೂರ್ವ ಭಾಗದ, ವಾಯುನೆಲೆಯಲ್ಲಿ ಸ್ವಾಗತಿಸಲಾಗುತ್ತಿದೆ.

<><><>

ಧಾರವಾಡದ, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಅಭಿಯಾಂತ್ರಿಕ ಮತ್ತು ತಾಂತ್ರಿಕ ಮಹಾವಿದ್ಯಾಲಯದ ವಿದ್ಯಾರ್ಥಿನಿ, ಅನು ಮುತ್ತಗಿ ಅವರು, ಉತ್ತರಾಖಂಡದ ಡೆಹ್ರಾಡೂನ್‌ನಲ್ಲಿ ಆಯೋಜಿತ, ರಾಷ್ಟ್ರೀಯ ಕ್ರೀಡಾಕೂಟದಲ್ಲಿ, ರಾಜ್ಯದ ಜಿಮ್ನಾಸ್ಟಿಕ್ಸ್ ತಂಡವನ್ನು ಪ್ರತಿನಿಧಿಸಲಿದ್ದಾರೆ.

<><><>

ಗದುಗಿನ ಶ್ರೀ ವೀರೇಶ್ವರ ಪುಣ್ಯಾಶ್ರಮದ ಸಂಸ್ಥಾಪಕರಾದ ಗಾನಯೋಗಿ ಲಿಂಗೈಕ್ಯ ಪಂಡಿತ ಪಂಚಾಕ್ಷರಿ ಶಿವಯೋಗಿಗಳ 134ನೇ ಜಯಂತ್ಯುತ್ಸವ, ಹಾವೇರಿ ಜಿಲ್ಲೆ ಹಾನಗಲ್ ತಾಲೂಕು ಕಾಡಶೆಟ್ಟಿ ಹಳ್ಳಿಯಲ್ಲಿ ಇಂದು ನಡೆಯಲಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ರಾಜ್ಯ ಸರ್ಕಾರದಿಂದ, ಕಾಡಂಚಿನ ವನ್ಯಜೀವಿಗಳ ಸಂರಕ್ಷಣೆಗೆ, ವಿಶೇಷ ಕಾರಿಡಾರ್ ನಿರ್ಮಾಣ.

- ಉತ್ತರಕನ್ನಡದ, ಸಮುದ್ರ ತೀರ ಮತ್ತು ನದಿಗಳಲ್ಲಿ, ಪ್ಲಾಸ್ಟಿಕ್ ನಿಯಂತ್ರಿಸಲು, 'ಕೋಸ್ಟಲ್ ಮೆರೈನ್ ಇಕೋ ಸಿಸ್ಟಂ' ಜಾರಿಗೆ.

- ವರಕವಿ ಬೇಂದ್ರೆಯವರ, ಶ್ರೀ ವಿಠ್ಠಲ ಚಿಂತನೆಯ, 'ಅವಿಭಕ್ತ' ಕೃತಿ ಇಂದು ಬೆಂಗಳೂರಿನಲ್ಲಿ, ಬಿಡುಗಡೆ.
- ಧಾರವಾಡದ ಅಮರಗೋಳ ಎ.ಪಿ.ಎಂ.ಸಿ.ಯಲ್ಲಿ, ಮೂರು ದಿನಗಳ ಒಣ ಮೆಣಸಿನಕಾಯಿ ಮೇಳ, ಆರಂಭ.
- ಇಂದು, ಶ್ರೀ ಮಡಿವಾಳ ಮಾಚಿದೇವರ ಜಯಂತ್ಯುತ್ಸವ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>